ಓ. ಎಸ್ . 261/2019 ಪಿ.ಡಬ್ಲ್ಯೂ - 1 ಶ್ರೀನಿವಾಸ ಪಿ ಎಚ್

**(ದಿನಾಂಕಃ 25-09-2025 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು)**

**ಮುಂದುವರೆದ ವಾಟಿ ಸವಾಲು : ಪ್ರತಿವಾದಿ ಪರ ಶ್ರೀ ಬಿ ಎಂ ಜೆ ವಕೀಲರಿಂದ -**

1. ದಿನಾಂಕ 01-07-2019 ರಂದು ನಾನು ಆಜು-ಬಾಜು ಜಮೀನಿನ ಮಾಲೀಕರಿಗೆ ಖುದ್ದಾಗಿ ಮತ್ತು ಸಾದಾ ಪೋಸ್ಟ ಮೂಲಕ ನೋಟಿಸ ಜಾರಿ ಮಾಡಿದ್ದೆ. ನಾನು ಅರ್ಜಿದಾರರಾದ ಶಾಂತೇಶಕುಮಾರ ಲಕ್ಕಪ್ಪ ಮೂಡಲಗಿ ಹಾಗೂ ಸರ್ವೆ ನಂ. 483 ರ ಲಾಗುದಾರರಾದ ಮಾರುತಿ ಯಮಕನಮರಡಿ, ರಾಮಚಂದ್ರ ಯಮಕನಮರಡಿ, ಬವಣ್ಣೆ ಗೂಳಪ್ಪ ಯಮಕನಮರಡಿ , ಮಾರುತಿ ಗೂಳಪ್ಪ ಯಮಕನಮರಡಿ ಇವರಿಗೆ ನೋಟಿಸ ಜಾರಿ ಮಾಡಿದ್ದೆ. ನಾನು ಬಾಳಪ್ಪ ಸಣ್ಣಯಲ್ಲಪ್ಪ ಯಮಕನಮರಡಿ ಹಾಗೂ ನಾಗಪ್ಪ ಬಸವಣ್ಣೆ ಯಮಕನಮರಡಿ ಇವರಿಗೆ ನೋಟಿಸ ಜಾರಿ ಮಾಡಿರಲಿಲ್ಲ ಕಾರಣ ನನಗೆ ಮ್ಯೂಟೇಶನ ಆದ ಬಗ್ಗೆ ಮಾಹಿತಿ ಇರಲಿಲ್ಲ. ಅಳತೆ ಮಾಡುವ ಸಂದರ್ಭದಲ್ಲಿ ಲಾಗುದಾರರು ಹಾಗೂ ಅರ್ಜಿದಾರರ ಆರ್ ಟಿ ಸಿ ಯನ್ನು ತಾಳೆ ಮಾಡುತ್ತೇವೆ ಎಂದರೆ ನಿಜ. ಸರ್ವೆ ನಂ. 483 ರಲ್ಲಿ ಶಾಂತೇಶ ಮೂಡಲಗಿ ಇವರ ಹೆಸರು ಇತ್ತು . ದಿನಾಂಕ 7-1-2019 ರಂದು ಸರ್ವೆ ನಂ. 482 ರಲ್ಲಿ ಪಹಣಿ ಪತ್ರಿಕೆಯಲ್ಲಿ ಯಾರ ಹೆಸರು ಇತ್ತು ಎಂದು ನನಗೆ ಗೊತ್ತಿಲ್ಲ. ಅರ್ಜಿದಾರರು ಸರ್ವೆ ನಂ. 482 ರ ಪಹಣಿ ಪತ್ರಿಕೆ ಕೊಟ್ಟಿರಲಿಲ್ಲ. ಸನ್ 2019 ರಲ್ಲಿ ಸರ್ವೆ ನಂ. 482 ರಲ್ಲಿ ಪಹಣಿ ಪತ್ರಿಕೆಯಲ್ಲಿ ಪ್ರತಿವಾದಿಯರ ಹೆಸರು ಇತ್ತು ಎಂದರೆ ನಿಜ. ಪ್ರತಿವಾದಿಯರಿಗೆ ಮೋಜಣಿ ಮಾಡುವ ಪೂರ್ವದಲ್ಲಿ ಯಾವುದೇ ನೋಟಿಸ ನಮ್ಮ ಇಲಾಖೆಯಿಂದ ಬಂದಿಲ್ಲ ಎಂದರೆ ಸರಿಯಲ್ಲ.

**( ಪ್ರತಿವಾದಿ ಪರ ವಕೀಲರು ಮುಂದುವರೆದ ವಾಟಿಪೀ ಸವಾಲಿಗೆ ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಯಿತು.)**

**(ಸಾಕ್ಷಿಯ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)**

**ಓ ಹೆ ಕೇ ಸರಿ ಅದೇ**

(ಆದಿತ್ಯ ಆರ್. ಕಲಾಲ್)
**ಸಿ ಜೆ & ಜೆ ಎಂ ಎಫ್ ಸಿ ಹುಕ್ಕೇರಿ**